# <u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1084
ಸದಸ್ಯರ ಹೆಸರು : ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 25.07.2024
ಉತ್ತರಿಸುವ ಸಚಿವರು : ಗೃಹ ಸಚಿವರು

<table>
<tr><th>ಕ್ರಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೆಂಗಳೂರು ನಗರ ಸೇರಿದಂತೆ ಇತರೆ ಎಲ್ಲಾ ಜಿಲ್ಲೆಗಳಲ್ಲಿ ಕಾನೂನು ಸುವ್ಯವಸ್ಥೆ ಹದಗೆಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಎಲ್ಲಾ ಕಡೆ ದೌರ್ಜನ್ಯ, ಕೊಲೆ, ಅತ್ಯಾಚಾರದಂತಹ ಪ್ರಕರಣಗಳು ಮರುಕಳಸುತ್ತಿರುವುದಕ್ಕೆ ಸೂಕ್ತ ಕಾರಣಗಳನ್ನು ನೀಡುವುದು;</td><td>ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಕೊಲೆ, ದರೋಡೆ, ಅತ್ಯಾಚಾರ ಹಾಗೂ ಪೋಕ್ಸೋ ದಾಖಲಾದ ಪ್ರಕರಣಗಳ ಅಂಕಿ ಅಂಶಗಳ ಮಾಹಿತಿ ಈ ಕೆಳಕಂಡಂತಿರುತ್ತದೆ.
<table>
<tr><th>ವಿಷಯ</th><th>2022</th><th>2023</th><th>2024 (ಜೂನ್ 30 ರವರೆಗೆ)</th></tr>
<tr><td>ಕೊಲೆ</td><td>1370</td><td>1296</td><td>633</td></tr>
<tr><td>ದರೋಡೆ</td><td>1286</td><td>1426</td><td>747</td></tr>
<tr><td>ಅತ್ಯಾಚಾರ</td><td>537</td><td>607</td><td>332</td></tr>
<tr><td>ಪೋಕ್ಸೋ</td><td>3194</td><td>3864</td><td>2025</td></tr>
</table>
ಬೆಂಗಳೂರು ನಗರ ಸೇರಿದಂತೆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಗೆ ಭಂಗವನ್ನುಂಟು ಮಾಡುವುದನ್ನು ತಡೆಯಲು ಪೋಲೀಸ್ ಇಲಾಖೆಯು ಕೈಗೊಂಡ ಕ್ರಮಗಳು ಈ ಕೆಳಗಿನಂತಿವೆ:-<br>
➢ ಕೊಲೆ ಪ್ರಕರಣಗಳು ವ್ಯಕ್ತಿಗಳ / ಗುಂಪುಗಳ ಮಧ್ಯೆ ವೈಯಕ್ತಿಕ ದ್ವೇಷ ಮತ್ತು ಪ್ರತೀಕಾರದಿಂದ ಸಂಭವಿಸಬಹುದಾಗಿರುತ್ತವೆ. ಆದ್ದರಿಂದ ಈ ರೀತಿಯ ಮಾಹಿತಿ ದೊರೆತ ಕೂಡಲೇ ಪೋಲೀಸರು ಸೂಕ್ತ ಕ್ರಮಕೈಗೊಂಡು ಕೊಲೆ / ಹತ್ಯೆ ಘಟನೆಗಳು ಜರುಗದಂತೆ ನೋಡಿಕೊಳ್ಳಲಾಗುವುದು.<br>
➢ ಬಹಳಷ್ಟು ಪ್ರಕರಣಗಳಲ್ಲಿ ದೂರು ಮತ್ತು ಪ್ರತಿ ದೂರು ಬಂದಂತಹ ಸಂದರ್ಭದಲ್ಲಿ ಎರಡು ದೂರುದಾರರು ಮತ್ತು ಪ್ರತಿ ದೂರುದಾರರಿಗೆ ತಿಳುವಳಿಕೆ ನೀಡಿ, ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಪಿಎಆರ್ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.<br>
➢ ಯಾವುದೇ ರೀತಿಯ ದೂರು ಬಂದಾಗಲೂ ಸಹ ದೂರನ್ನು ಕೂಲಂಕಷವಾಗಿ ಪರಿಶೀಲಿಸಿ ಪೋಲೀಸ್ ಠಾಣೆಯ ದಾಖಲಾತಿಯಲ್ಲಿ ನಮೂದಿಸಿ ಪ್ರತಿ ದೂರನ್ನು ಸಹ ಬಗೆಹರಿಸಲು ಕ್ರಮಕೈಗೊಳ್ಳಲಾಗುತ್ತಿದೆ.<br>
➢ ಸಮಾಜದಲ್ಲಿ ಅಶಾಂತಿ ತೋರಿದ ವ್ಯಕ್ತಿಗಳನ್ನು ಕಾನೂನಿನ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ ಸಮಾಜದಲ್ಲಿ ಶಾಂತಿ ಕಾಪಾಡುವಂತೆ ಬಾಂಡ್‌ಗಳನ್ನು ಬರೆಸಿಕೊಳ್ಳಲಾಗುತ್ತಿದೆ. ಹಾಗೂ ಕೆಲವೊಂದು ಪ್ರಕರಣಗಳಲ್ಲಿ ಸಮಾಜಕ್ಕೆ ಅಶಾಂತಿ ತರುವಂತಹ ವ್ಯಕ್ತಿಗಳನ್ನು ಗಡಿಪಾರು ಮಾಡಲು ಹಾಗೂ ಗೂಂಡಾ ಕಾಯ್ದೆಯಡಿಯಲ್ಲಿ ಕ್ರಮಕೈಗೊಳ್ಳಲು</td></tr>
</table>

| | | |
|---|---|---|
| | | ಕ್ರಮವಹಿಸಲಾಗುತ್ತಿದೆ. |
| | | ➢ ಯಾವುದೇ ರೀತಿಯ ಘಟನೆಗಳು ಜರುಗುವ ಸಂದರ್ಭದಲ್ಲಿ ಸಮಯಕ್ಕೆ ಸರಿಯಾಗಿ ಘಟನಾ ಸ್ಥಳಕ್ಕೆ ಪೊಲೀಸರು, ಅಧಿಕಾರಿಗಳು ತಲುಪುವ ಸಂಬಂಧ ಕರ್ನಾಟಕ ರಾಜ್ಯದಲ್ಲಿ ಇ.ಆರ್.ಎಸ್.ಎಸ್. (112) ವ್ಯವಸ್ಥೆಯನ್ನು ನಿರ್ವಹಿಸಲಾಗುತ್ತಿದೆ. |
| | | ➢ ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ ಪ್ಯಾನಿಕೋಡ್, ಪಿಂಕ್ ಹೊಯ್ಸಳ, ಮಹಿಳಾ ಠಾಣೆ, ಮಹಿಳಾ ವಿಶೇಷ ಪೊಲೀಸ್ ಪಡೆಗಳನ್ನು ಸ್ಥಾಪಿಸಲಾಗಿರುತ್ತದೆ. |
| | | ➢ ಠಾಣಾ ವ್ಯಾಪ್ತಿಯಲ್ಲಿ ಶಾಂತಿ ಸಭೆ, ಯುವಜನ ಸಭೆ, ಮೊಹಲ್ಲ ಮಿಟಿಂಗ್, ನಾಗರೀಕ ಸಮಿತಿ ಸಭೆಗಳನ್ನು ನಡೆಸಿ ಸಾರ್ವಜನಿಕರಿಗೆ ಮತ್ತು ಯುವಕರಿಗೆ ತಿಳುವಳಿಕೆಗಳನ್ನು ನೀಡಲಾಗುತ್ತಿದೆ ಹಾಗೂ ವೃತ್ತ ಉಪ ವಿಭಾಗ, ಜಿಲ್ಲಾ ಮಟ್ಟದಲ್ಲಿಯೂ ಸಹ ಸಭೆಗಳನ್ನು ಕೈಗೊಳ್ಳಲಾಗುತ್ತಿದೆ. |
| | | ➢ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ತರುವ ವ್ಯಕ್ತಿಗಳು/ ಸಂಘಟನೆಗಳು/ಸಾಮಾಜಿಕ ಜಾಲತಾಣಗಳ ಬಗ್ಗೆ ಸತತ ನಿಗಾ ಇಡಲಾಗಿದೆ. |
| | | ➢ ಠಾಣಾ ವ್ಯಾಪ್ತಿಯಲ್ಲಿ ರಾತ್ರಿ ಬೀಟ್ ಮತ್ತು ಶುಭೋದಯ (ಗುಡ್ ಮಾರ್ನಿಂಗ್) ಬೀಟುಗಳನ್ನು ಕೈಗೊಳ್ಳಲಾಗಿದೆ. ಏಕ ಕಾಲದಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಕ್ಷಿಪ್ರ ವಾಹನ ತಪಾಸಣೆಗಳನ್ನು ಕೈಗೊಳ್ಳಲಾಗಿದೆ. |
| | | ➢ ಪ್ರಮುಖ ಹಬ್ಬದ ಆಚರಣೆಗಳ ಸಂದರ್ಭದಲ್ಲಿ ಎಲ್ಲಾ ಸಮುದಾಯಗಳ ಮುಖಂಡರುಗಳನ್ನು ಒಳಗೊಂಡ ಶಾಂತಿ ಸಭೆಗಳನ್ನು ಜಿಲ್ಲಾ ಮಟ್ಟದಲ್ಲಿ, ಉಪ-ವಿಭಾಗದ ಮಟ್ಟದಲ್ಲಿ ಮತ್ತು ಪೊಲೀಸ್ ಠಾಣೆ ಮಟ್ಟದಲ್ಲಿ ನಡೆಸಲಾಗುತ್ತಿದೆ. |
| | | ➢ ಗಲಭೆ ಪ್ರಕರಣಗಳಲ್ಲಿ ಭಾಗಿಯಾಗುವ ಆರೋಪಿಗಳ ವಿರುದ್ಧ ಸೂಕ್ತ ಕಾನೂನು ರೀತ್ಯಾ ಕ್ರಮಗಳನ್ನು ಜರುಗಿಸಲಾಗುತ್ತಿರುತ್ತದೆ. |
| | | ➢ ಗುಪ್ತ ಮಾಹಿತಿ ಸಿಬ್ಬಂದಿ ಹಾಗೂ ಬೀಟ್ ಸಿಬ್ಬಂದಿಯವರ ಮೂಲಕ ಮುಂಗಡವಾಗಿ ಮಾಹಿತಿಯನ್ನು ಸಂಗ್ರಹಿಸಿ ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಸೂಕ್ತ ಕ್ರಮ ಕೈಕೊಳ್ಳಲಾಗುತ್ತಿದೆ. |
| | | ➢ ದಿನದ 24 ಗಂಟೆಗಳ ಕಾಲ ಗಸ್ತು ಕರ್ತವ್ಯಕ್ಕಾಗಿ ಶಕ್ತಿ ಪೆಟ್ರೋಲಿಂಗ್, ಹೊಯ್ಸಳ ವಾಹನ ನಿಯಮಿತವಾಗಿ ನಿಯೋಜಿಸಲಾಗಿ, ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವಂತಹ ರೌಡಿಗಳಿಗೆ ಕಠಿಣವಾದ ಎಚ್ಚರಿಕೆಗಳನ್ನು ನೀಡಿ, ಯಾವುದೇ ಕೃತ್ಯಗಳನ್ನು ಮಾಡಿದಾಗ ಅವರ ಮೇಲೆ ಆಗುವ ಪರಿಣಾಮಗಳ ಗಂಭೀರತೆಯ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಡಲಾಗಿರುತ್ತದೆ. |
| | | ➢ ಸಾಮಾಜಿಕ ಜಾಲ ತಾಣಗಳಲ್ಲಿ ಕೋಮು ಸೌಹಾರ್ದತೆ & ಶಾಂತಿ ಕದಡುವ ವ್ಯಕ್ತಿಗಳನ್ನು ಗುರುತಿಸಿ, ಅಂತಹವರ ಮೇಲೆ ನಿಗಾ ಇಡಲಾಗುತ್ತಿದೆ. |
| | | ➢ ಬೆಂಗಳೂರು ನಗರದ ಮಹಿಳೆಯರ ರಕ್ಷಣೆಗಾಗಿ, ಮಹಿಳಾ ಸಹಾಯವಾಣಿ 1091 ಮತ್ತು ವನಿತಾ ಸಹಾಯವಾಣಿ 22943225 ಕಾರ್ಯ ನಿರ್ವಹಿಸುತ್ತಿರುತ್ತದೆ. |
| | | ➢ ದಿನದ 24 ಗಂಟೆಯೂ ಸಹ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆ |

| | | |
|---|---|---|
| | | "ಪಿಂಕ್ ಹೊಯ್ಸಳ" ಮತ್ತು 112 ಗಸ್ತು ವಾಹನಗಳು ಗಸ್ತು ಕಾರ್ಯ ನಿರ್ವಹಿಸುತ್ತಿವೆ.<br>➢ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆ, ತ್ವರಿತ ನೆರವು ಸ್ಪಂದನೆಗಾಗಿ ನಿರ್ಭಯಾ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಒಟ್ಟು 1050 ಮಹಿಳಾ ಹೆಲ್ಪ್ ಡೆಸ್ಕ್ (Women Help Desk) ಗಳನ್ನು ಸ್ಥಾಪಿಸಲಾಗಿರುತ್ತದೆ.<br>➢ ಮಹಿಳೆಯರ ಮತ್ತು ಮಕ್ಕಳ ಕಳ್ಳ ಸಾಗಣೆ ತಡೆಗಟ್ಟುವ ಸಲುವಾಗಿ ಸದರಿ ಪ್ರಕರಣಗಳನ್ನು ಪ್ರತ್ಯೇಕವಾಗಿ ನಿರ್ವಹಿಸಲು ರಾಜ್ಯದಲ್ಲಿ ಒಟು 35 ಮಾನವ ಕಳ್ಳ ಸಾಗಣೆ ನಿಷೇಧ ಘಟಕ (Anti Human Trafficking Unit) ಗಳನ್ನು ಮಹಿಳಾ ಪೊಲೀಸ್ ಠಾಣೆಗಳಲ್ಲಿ ಸ್ಥಾಪಿಸಲಾಗಿರುತ್ತದೆ.<br>➢ ಸಂತ್ರಸ್ಥರ ಪರಿಹಾರ ನಿಧಿ ಅಡಿಯಲ್ಲಿ ನೊಂದ ಮಹಿಳಾ ಸಂತ್ರಸ್ಥರಿಗೆ ಸರ್ಕಾರದಿಂದ ನೀಡುವ ಸಹಾಯ ಧನವನ್ನು ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದಿಂದ ಒದಗಿಸುತ್ತಿದ್ದು ಅದಕ್ಕೆ ಪೊಲೀಸ್ ಇಲಾಖೆ ವತಿಯಿಂದ ಅಗತ್ಯ ದಾಖಲೆಗಳನ್ನು ಒದಗಿಸಲಾಗುತ್ತಿದೆ.<br>➢ ರಾಜ್ಯದಲ್ಲಿ ಕೋಮು ಗಲಭೆಗಳಂದ ಯಾವುದೇ ರೀತಿಯ ಕೊಲೆಗಳು ನಡೆಯದಂತೆ ಹಾಗೂ ಕೊಲೆಗಳಿಗೆ ಪ್ರಚೋದನೆ ನೀಡುವ ಯಾವುದೇ ರೀತಿಯ ಸಾಮಾಜಿಕ ಜಾಲತಾಣದಲ್ಲಿ ಪ್ರಸಾರ ಮಾಡುವ ಸಂದೇಶಗಳನ್ನು ಪತ್ತೆ ಹಚ್ಚಿ ಆರೋಪಿಗಳ ಮೇಲೆ ಕ್ರಮಕೈಗೊಳ್ಳಲು ಸಾಮಾಜಿಕ ಜಾಲತಾಣ ನಿಗಾ ಘಟಕಗಳನ್ನು ಜಿಲ್ಲಾ ಹಾಗೂ ಪೊಲೀಸ್ ಠಾಣಾ ಮಟ್ಟದಲ್ಲಿ ತೆರೆಯಲಾಗಿರುತ್ತದೆ. |
| ಆ | ಇತ್ತೀಚೆಗೆ ಚಿಕ್ಕಮಗಳೂರು ಜಿಲ್ಲೆ ಮುಳ್ಳಯ್ಯನಗಿರಿಗೆ ನೀಡಿದ ಭೇಟಿ ನೀಡಿದ ಪ್ರವಾಸಿಗರ ಮೇಲೆ ಸ್ಥಳೀಯ ಬಾಡಿಗೆ ಜೀಪ್ ಮಾಲೀಕರು ಪ್ರವಾಸಿಗರ ಕಾರಿಗೆ ಡಿಕ್ಕಿ ಹೊಡೆದಿರುವುದು;<br>ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪ್ರವಾಸಿಗರಿಗೆ ರಕ್ಷಣೆ ಇಲ್ಲವೇ; ಈ ಸಂಬಂಧ ಸರ್ಕಾರ ಕೈಗೊಳ್ಳುವ ಕ್ರಮಗಳೇನು; ಅನ್ಯಾಯ ಆದ ಪ್ರವಾಸಿಗರಿಗೆ ಸರ್ಕಾರದ ವತಿಯಿಂದ ಪರಿಹಾರಗಳೇನು; | ದಿನಾಂಕ: 13.07.2024 ರಂದು ಮದ್ಯಾಹ್ನ 15.00 ಗಂಟೆಗೆ ಪಿರ್ಯಾದಿ ಶ್ರೀ ಮನು ಜಿ.ಆರ್ ಇವರು ಚಿಕ್ಕಮಗಳೂರು ಗ್ರಾಮಾಂತರ ಠಾಣೆಗೆ ಹಾಜರಾಗಿ ಮುಳ್ಳಯ್ಯಗಿರಿ, ಸೀತಾಳಯ್ಯನಗಿರಿ ಮದ್ಯದ ತಿರುವಿನಲ್ಲಿ ಪಿರ್ಯಾದಿ ಚಲಾಯಿಸುತಿದ್ದ ವಾಹನ ಸಂ. ಕೆ.ಎ-03, ಎಂ.ಇ-4672ರ ಇನೋವಾ ಕಾರಿನಲ್ಲಿ ಮುಳ್ಳಯ್ಯನಗಿರಿಗೆ ಹೋಗಲೆಂದು ತಿರುವಿನಲ್ಲಿ ಹೋಗುತ್ತಿರುವಾಗ ಮುಳ್ಳಯ್ಯನಗಿರಿ ಕಡೆಯಿಂದ ಬಂದ ಕೆ.ಎ-20-ಬಿ-9060 ಟಾಟಾ ಸುಮೋ ವಾಹನದ ಚಾಲಕನು ಅತಿ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಇನೋವಾ ಕಾರಿಗೆ ಡಿಕ್ಕಿ ಹೊಡೆಸಿದ ಪರಿಣಾಮ ವಾಹನದ ಮುಂಭಾಗ ಮತ್ತು ಬಲಭಾಗದಲ್ಲಿ ಜಖಂ ಆಗಿರುತ್ತೆಂದು ಇತ್ಯಾದಿಯಾಗಿ ನೀಡಿದ ದೂರಿನ ಮೇರೆಗೆ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 226/2024, ಕಲಂ. 281 ಬಿ.ಎನ್.ಎಸ್. ರೀತ್ಯಾ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿರುತ್ತದೆ.<br><br>ಈಗಾಗಲೇ ಪ್ರಕರಣದಲ್ಲಿ ಎರಡು ವಾಹನಗಳನ್ನು ಅಮಾನತ್ತುಪಡಿಸಿಕೊಂಡಿದ್ದು, ಪಿರ್ಯಾದುದಾರರ ಕಾರ್ ನಂ. ಕೆ.ಎ-03, ಎಂ.ಇ-4672ರ ಇನೋವಾ ಕಾರನ್ನು ಐ.ಎಂ. ವಿ: ಪರೀಕ್ಷೆಯ ನಂತರ ಬಿಡುಗಡೆ ಮಾಡಿದ್ದು, ಆರೋಪಿ ಪ್ರಕಾಶ್ ಕುಮಾರ್ ಬಿನ್ ಇತ್ತಪ್ಪ ಇವರನ್ನು ವಶಕ್ಕೆ ಪಡೆದುಕೊಂಡು ಪ್ರಕರಣದ ಬಗ್ಗೆ ವಿಚಾರಣೆ ನಡೆಸಿ ಕಲಂ. 35(3) |

ಬಿ.ಎನ್.ಎಸ್.ಎಸ್. ರೀತ್ಯಾ ನೋಟೀಸ್ ಜಾರಿ ಮಾಡಿ ಬಿಡುಗಡೆ ಮಾಡಿರುತ್ತದೆ. ಸದರಿ ಪ್ರಕರಣವು ಪ್ರಸ್ತುತ ತನಿಖೆಯಲ್ಲಿರುತ್ತೆ.

ರಜಾ ದಿನಗಳು ಮತ್ತು ವಾರದ ಕೊನೆಯ ದಿನಗಳಂದು ಜಿಲ್ಲೆಯ ಮುಳ್ಳಯ್ಯನಗಿರಿ ಮತ್ತು ಇತರ ಪ್ರೇಕ್ಷಣೀಯ ಸ್ಥಳಗಳಿಗೆ ಹೆಚ್ಚಿನ ಪ್ರವಾಸಿಗರು ಬೇಟಿ ನೀಡುತ್ತಿದ್ದು, ಸದರಿ ಘಟನೆಯ ನಂತರ, ಪ್ರವಾಸಿಗರಿಗೆ, ಸ್ಥಳೀಯರು ಮತ್ತು ಬಾಡಿಗೆ ಜೀಪ್ ಚಾಲಕರು ಮತ್ತು ಮಾಲೀಕರುಗಳಿಂದ ಯಾವುದೇ ರೀತಿಯ ತೊಂದರೆಯಾಗದಂತೆ ಹೆಚ್ಚಿನ ಸಿಬ್ಬಂದಿಗಳನ್ನು ಆಯಾ ಕಟ್ಟಿನ ಸ್ಥಳಗಳಲ್ಲಿ ನಿಯೋಜಿಸಿ, ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಲಾಗುತ್ತಿದ್ದು, ಈ ಬಗ್ಗೆ ಸೂಕ್ತ ನಿಗಾವಹಿಸಲಾಗಿದೆ.

ಪ್ರವಾಸಿಗರ ಜೊತೆ ಯಾವ ರೀತಿ ನಡೆದುಕೊಳ್ಳಬೇಕು, ಅವರುಗಳ ಸುರಕ್ಷತೆ ಬಗ್ಗೆ ಯಾವ ರೀತಿ ಕ್ರಮ ವಹಿಸಬೇಕು ಹಾಗೂ ಇತರೆ ವಿಚಾರಗಳ ಬಗ್ಗೆ, ಎಲ್ಲಾ ಟೂರಿಸ್ಟ್ ಜೀಪ್ ಚಾಲಕರಿಗೆ ಸಭೆಯನ್ನು ನಡೆಸಿ ಕಟ್ಟು ನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ.

ಸೀತಾಳಯ್ಯನಗಿರಿಗೆ ಭೇಟಿ ನೀಡಿದ ಪ್ರವಾಸಿಗರ ವಾಹನಗಳಿಗೆ ಸ್ಥಳೀಯ ಬಾಡಿಗೆ ಜೀಪ್ ಚಾಲಕರುಗಳು ಕಾರಿಗೆ ಡಿಕ್ಕಿ ಹೊಡೆದು ಗಲಾಟೆ ಮಾಡಿದವರ ಮೇಲೆ ಲಘು ಪ್ರಕರಣ ದಾಖಲಿಸಿದ ಬಗ್ಗೆ ವಿವರ ಕೆಳಗಿನಂತಿರುತ್ತದೆ:-

| ಕ್ರಸ | ಪಿಟಿ ನಂಬರ್ | ಎದುರುದಾರರ ಹೆಸರು ಮತ್ತು ವಿಳಾಸ | ನ್ಯಾಯಾಲಯದಲ್ಲಿ ದಂಡ ವಿಧಿಸಿದ ಬಗ್ಗೆ |
|---|---|---|---|
| 1 | 678/2024 | ಸುನಿಲ್ ಬಿನ್ ಫಳನಿ 33 ವರ್ಷ ಜೀಪ್ ಚಾಲಕ ವಾಸ ನಾರಾಯಣಪುರ ಚಿಕ್ಕಮಗಳೂರು ನಗರ | ಲಘು ಪ್ರಕರಣದ ದೋಷಾರೋಪಣ ಪತ್ರಗಳನ್ನು ತಯಾರಿಸಿ ಘನ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. |
| 2 | 679/2024 | ಸತೀಶಕುಮಾರ್, ಬಿನ್ ನಟರಾಜು 27 ವರ್ಷ ಜೀಪ್ ಚಾಲಕ ವಾಸ ಅಲ್ಲಂಪುರ ಗ್ರಾಮ ಚಿಕ್ಕಮಗಳೂರು ತಾ | |
| 3 | 680/2024 | ಶಂಕರ್ ಬಿನ್ ವೇಲು ಜೀಪ್ ಚಾಲಕ ವಾಸ ನರಿಗುಡ್ಡನಹಳ್ಳಿ ಚಿಕ್ಕಮಗಳೂರು ನಗರ | |

| | | |
|---|---|---|
| ಇ | ಇಂತಹ ಘಟನೆಗಳಿಗೆ ಕಾನೂನಿಗೆ ಅನೇಕರು ಹೆದರದೆ ಗೌರವಿಸದಿರುವುದು ಸರ್ಕಾರಕ್ಕೆ ಬಂದಿದೆಯೇ ಈಗಿನ ಯುವಕರು | ವೀಲ್ಹಿಂಗ್ ತಡೆಗಟ್ಟಲು ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿರುತ್ತದೆ:-<br>➢ ಪ್ರತಿ ವರ್ಷ ರಾಜ್ಯದಲ್ಲಿ ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮದಲ್ಲಿ ಎಲ್ಲಾ ಶಾಲಾ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ವೀಲ್ಹಿಂಗ್ ಮಾಡದಿರುವುದರ ಜೊತೆಗೆ ವಾಹನ ಚಲಾಯಿಸುವಾಗ ಮೊಬೈಲ್ ಬಳಸದಂತೆ ಸೀಟ್‌ಬೆಲ್ಟ್ ಬಳಕೆಯ ಮಹತ್ವ, ಹೆಲ್ಮೆಟ್ ಬಳಕೆಯ ಮಹತ್ವದ ಹಾಗೂ ಇನ್ನಿತರೇ ರಸ್ತೆ |

| | | |
|---|---|---|
| | ಯಾವುದೇ ಭಯವಿಲ್ಲದೇ ವೀಲ್ಹಿಂಗ್ ಮಾಡಿಕೊಂಡು ರಸ್ತೆ ಸವಾರರಿಗೆ ತೊಂದರೆ ಉಂಟು ಮಾಡುತ್ತಿರುವುದರ ಮೇಲೆ ಕ್ರಮ ಕೈಗೊಳ್ಳುವುದಕ್ಕಿಂತ ಈ ರೀತಿ ಆಗದಂತೆ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು; | ಸುರಕ್ಷತೆಯ ಮಹತ್ವ ಕುರಿತು ಅರಿವು ಮೂಡಿಸುವ ಕಾರ್ಯವನ್ನು ಮಾಡಲಾಗುತ್ತಿರುತ್ತದೆ.<br>➢ ವೀಲ್ಹಿಂಗ್ ಪ್ರಕರಣಗಳಲ್ಲಿ ಹೆಚ್ಚಾಗಿ ಯುವಕರು ಭಾಗಿಯಾಗುತ್ತಿರುವುದನ್ನು ವಿಶ್ಲೇಷಿಸಲಾಗಿದ್ದು, ರಸ್ತೆ ಸುರಕ್ಷತೆಯ ಬಗ್ಗೆ ಬೆಂಗಳೂರು ನಗರದಲ್ಲಿ ಸ್ಟೂಡೆಂಟ್ಸ್ ಅಸೋಸಿಯೇಷನ್ ಫಾರ್‌ರೋಡ್ ಸೇಫ್ಟಿ ಕಾರ್ಯಕ್ರಮದ ಮೂಲಕ ನಗರದ ಎಲ್ಲಾ ಶಾಲೆಗಳಲ್ಲಿ ಸಂಚಾರ ನಿಯಮ ಅರಿವು ಮೂಡಿಸುವ ಹಾಗೂ ತರಬೇತಿ ನೀಡುವ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ.<br>➢ ಬೆಂಗಳೂರಿನ ಸಂಚಾರ ತರಬೇತಿ ಮತ್ತು ರಸ್ತೆ ಸುರಕ್ಷತಾ ಸಂಸ್ಥೆಯಲ್ಲಿ ಹಾಗೂ ಸಂಚಾರ ನಿರ್ವಹಣಾ ಕೇಂದ್ರಕ್ಕೂ ಸಹ ಭೇಟಿ ನೀಡುವ ಶಾಲಾ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ, ಬಸ್/ಆಟೋ/ಕ್ಯಾಬ್ ಚಾಲಕರಲ್ಲೂ ಸಹ ತಮ್ಮ ಕುಟುಂಬದ ಸದಸ್ಯರು ವೀಲ್ಹಿಂಗ್ ನಂತಹ ಅಪಾಯಕಾರಿ ಚಾಲನೆ ಮಾಡದಿರುವ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿರುತ್ತದೆ.<br>➢ ಒಂದು ವೇಳೆ ಅಪ್ರಾಪ್ತ ವಯಸ್ಕರು ವೀಲ್ಹಿಂಗ್ ಮಾಡುತ್ತಿದ್ದರೆ, ಅಂತಹವರ ಪೋಷಕರ ಮೇಲೆ ಐ.ಎಂ.ವಿ ಕಾಯ್ದೆ ಕಲಂ: 199(ಎ) ರಡಿ ಕ್ರಮ ಜರುಗಿಸುವಂತೆ ಮತ್ತು ಅಂತಹ ವಾಹನಗಳನ್ನು ವಶಕ್ಕೆ ಪಡೆದುಕೊಂಡು, ಆರ್‌ಸಿಯನ್ನು ರದ್ದುಗೊಳಿಸಲು ಆರ್.ಟಿ.ಓ ಅಧಿಕಾರಿಗಳಿಗೆ ಕಳುಹಿಸಲಾಗುತ್ತಿರುತ್ತದೆ ಮತ್ತು ಸಂಬಂಧ ಪಟ್ಟ ಪೋಷಕರಿಂದ ಇನ್ನು ಮುಂದೆ ತಮ್ಮ ಮಕ್ಕಳಿಗೆ ಮುಂದಿನ ದಿನಗಳಲ್ಲಿ ವೀಲ್ಹಿಂಗ್ ಮಾಡದಂತೆ ಕ್ರಮ ಕೈಗೊಳ್ಳಲು ಒಪ್ಪಿಗೆ ಮುಚ್ಚಳಿಕೆಯನ್ನು ಪಡೆಯಲಾಗಿರುತ್ತದೆ.<br>➢ ವ್ಹೀಲಿಂಗ್ ಪ್ರಕರಣಗಳು ಅವ್ಯವಹಾರವಾಗಿ ಕಂಡು ಬರುವ ರಸ್ತೆಗಳನ್ನು ಗುರುತಿಸಿ, ಸದರಿ ರಸ್ತೆಗಳಲ್ಲಿ ವೀಲ್ಹಿಂಗ್ ನಿಯಮ ಉಲ್ಲಂಘನೆಗಳು ಆಗದಂತೆ ಗಮನ ಹರಿಸಲು ಕೋಬ್ರಾ ಸಿಬ್ಬಂದಿಗಳಿಗೆ ಗಸ್ತು ಕರ್ತವ್ಯಕ್ಕೆ ನಿಯೋಜಿಸಲಾಗಿರುತ್ತದೆ.<br>➢ ವೀಲ್ಹಿಂಗ್ ಕುರಿತಂತೆ ಸಾಮಾಜಿಕ ಜಾಲತಾಣಗಳಲ್ಲಿ ಬರುವ ವಿಡಿಯೋ ಫೂಟೇಜ್‌ಗಳನ್ನು ಆಧರಿಸಿಯೂ ಸಹ ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ವೀಲ್ಹಿಂಗ್ ಮಾಡುವುದನ್ನು ತಡೆಗಟ್ಟುವ ಸಲುವಾಗಿ ಈ ರೀತಿಯ ಸಂಚಾರಿ ನಿಯಮ ಉಲ್ಲಂಘನೆದಾರರುಗಳ ವಿರುದ್ಧ ಬಿ.ಎನ್.ಎಸ್ ಕಾಯ್ದೆ ಕಲಂ 281 ಮತ್ತು ಐಎಂವಿ ಕಾಯ್ದೆಯಡಿ ಕಲಂ 184, 189 ರೀತ್ಯಾ ಪ್ರಕರಣಗಳನ್ನು ದಾಖಲಿಸಿ ಮತ್ತು ಸಂಬಂಧಪಟ್ಟ ವಾಹನ ಸವಾರರ ಚಾಲನಾ ಅನುಜ್ಞಾ ಪತ್ರಗಳನ್ನು ಅಮಾನತ್ತುಪಡಿಸಲು ಸಂಬಂಧಪಟ್ಟ ಆರ್.ಟಿ.ಓ. ಕಛೇರಿಗೆ ಕಳುಹಿಸಲು ಕ್ರಮ ಕೈಗೊಳ್ಳಲಾಗುತ್ತಿರುತ್ತದೆ. |
| ಈ | ಕಾನೂನು ಸುವ್ಯವಸ್ಥೆಯನ್ನು ಸರಿಪಡಿಸಲು ಹಾಗೂ ಕಾನೂನಿನ ಬಗ್ಗೆ ಭಯ ಹುಟ್ಟಿಸಲು ಸರ್ಕಾರ ಸೂಕ್ತ ಮತ್ತು ಕಟ್ಟುನಿಟ್ಟಿನ ಕ್ರಮಗಳೇನಾದರೂ ಕೈಗೊಳ್ಳಲಿದೆಯೇ? | ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ:-<br>➢ ಕಾನೂನು ಸುವ್ಯವಸ್ಥೆಯನ್ನು ಸರಿಪಡಿಸಲು ಹಾಗೂ ಕಾನೂನಿನ ಬಗ್ಗೆ ಭಯ ಹುಟ್ಟಿಸಲು ಸಾರ್ವಜನಿಕರ ನೆಮ್ಮದಿಗೆ ಭಂಗ ತರುವ ವ್ಯಕ್ತಿಗಳನ್ನು ಗುರುತಿಸಿ ಗಡಿ ಪಾರಿಗೆ ಕ್ರಮ ವಹಿಸಲಾಗುತ್ತಿದೆ.<br>➢ ಶಾಂತಿ ಸಭೆ, ಹಿರಿಯ ನಾಗರೀಕರ ಸಭೆ, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿ ಜನರ ಸಭೆ ಮತ್ತು ಪ್ರಮುಖ ಹಬ್ಬಗಳಲ್ಲಿ ಗ್ರಾಮದ ವಿವಿಧ ಕೋಮಿನ ಮುಖಂಡರ ಸಭೆ ಮಾಡಿ ಕಾನೂನಿನ ಬಗ್ಗೆ ಅರಿವು ಮೂಡಿಸಿ |

| | | |
|---|---|---|
| | | ಅವರಿಗೆ ತಿಳುವಳಿಕೆ ನೀಡಲಾಗುತ್ತಿದೆ.<br>➢ ಸಾರ್ವಜನಿಕರಿಗೆ ಹಾಗೂ ಶಾಲಾ ಕಾಲೇಜುಗಳಲ್ಲಿ ಯುವ ಪೀಳಿಗೆಗೆ ಪೊಲೀಸ್ ಸಹಾಯವಾಣಿ-112, ಸೈಬರ್ ಸಹಾಯವಾಣಿ-1930, ಮಕ್ಕಳ ಸಹಾಯವಾಣಿ-1098 ಗಳಿದ್ದು, ಇವುಗಳ ಮೂಲಕ ಕಾನೂನಿನ ಅರಿವು ಮೂಡಿಸಲಾಗುತ್ತಿದೆ.<br>➢ ಅಪರಾಧ ಮಾಸಾಚರಣೆ ಸಂದರ್ಭಗಳಲ್ಲಿ ಪ್ರಮುಖ ಸ್ಥಳಗಳಲ್ಲಿ ಕಾನೂನು ಅರಿವು ಬಗ್ಗೆ ಭಿತ್ತಿ ಪತ್ರ, ಬ್ಯಾನರ್, ಜಾಥಾ ಮೂಲಕ ಅರಿವು ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಹೊಸ ಗಸ್ತು ವ್ಯವಸ್ಥೆಯನ್ನು ಜಾರಿಗೊಳಿಸಿ, ಪೋಲೀಸರು ಸಾರ್ವಜನಿಕರೊಂದಿಗೆ ಹೆಚ್ಚಿನ ಒಡನಾಟವನ್ನು ಹೊಂದುವ ಮೂಲಕ ಕಾನೂನು ಮತ್ತು ಸುವ್ಯವಸ್ಥೆಯನ್ನು ಮೂಲದಿಂದಲೇ ಬಲಪಡಿಸಲು ಕ್ರಮವಹಿಸಲಾಗುತ್ತಿದೆ.<br>➢ ಸಮರ್ಪಕ ರಾತ್ರಿ ಗಸ್ತು, ಗುಡ್ ಮಾರ್ನಿಂಗ್ ಬೀಟ್, ಫುಟ್ ಪೆಟ್ರೋಲಿಂಗ್ ನಿರ್ವಹಿಸುವ ಮೂಲಕ ಅಪರಾಧಿಕ ಚಟುವಟಿಕೆಗಳ ನಿಯಂತ್ರಣಕ್ಕೆ ಕ್ರಮ ವಹಿಸಲಾಗಿದೆ.<br>➢ ಕಾನೂನು ಮತ್ತು ಸುವ್ಯವಸ್ಥೆ ನಿಯಂತ್ರಣಕ್ಕಾಗಿ 112 (ಇಆರ್‌ಎಸ್‌ಎಸ್), ಹೆದ್ದಾರಿ ಗಸ್ತು ವ್ಯವಸ್ಥೆಯನ್ನು ಜಾರಿಗೊಳಿಸಿ ನಿರ್ವಹಿಸಲಾಗುತ್ತಿದೆ.<br>➢ ಲೋಕ ಸ್ಪಂದನ, ದೂರುದಾರರ ದಿನಾಚರಣೆ, ಜನಸ್ನೇಹಿ ಪೊಲೀಸ್, ಮಹಿಳಾ ಡೆಸ್ಕ್, ಗ್ರಾಮ ಸಭೆ, ಹಿರಿಯ ನಾಗರೀಕರ ಸಭೆ, ಸಾರ್ವಜನಿಕ ಸಂಪರ್ಕ ಸಭೆಯಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br>➢ ಮಾದಕ ದ್ರವ್ಯ ವಿರೋಧಿ ದಿನಾಚರಣೆ, ಅಪರಾಧ ತಡೆ ಮಾಸಾಚರಣೆ, ರಸ್ತೆ ಸುರಕ್ಷತಾ ಸಪ್ತಾಹ ಮುಂತಾದ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಮೂಲಕ ಸಾರ್ವಜನಿಕರಿಗೆ ಕಾನೂನು ಅರಿವು ಮೂಡಿಸಲಾಗುತ್ತಿದೆ.<br>➢ ಠಾಣಾ ಮಟ್ಟದಲ್ಲಿ ಬೀಟ್ ಸಿಬ್ಬಂದಿಯವರಿಂದ ಹಾಗೂ ಎಸ್.ಬಿ ಸಿಬ್ಬಂದಿಯವರಿಂದ ಗುಪ್ತ ಮಾಹಿತಿಯನ್ನು ಕಲೆ ಹಾಕಿ ಸಂಘಟಿತ ಅಪರಾಧಗಳ ನಿಯಂತ್ರಣಕ್ಕಾಗಿ ಮುಂಜಾಗ್ರತಾ ಕ್ರಮಗಳನ್ನು ಕೈಕೊಳ್ಳಲಾಗುತ್ತಿದೆ.<br>➢ ಪ್ರಮುಖ ಹಬ್ಬದ ಆಚರಣೆಗಳ ಸಂದರ್ಭದಲ್ಲಿ ಎಲ್ಲಾ ಸಮುದಾಯಗಳ ಮುಖಂಡರುಗಳನ್ನು ಒಳಗೊಂಡ ಶಾಂತಿ ಸಭೆಗಳನ್ನು ಜಿಲ್ಲಾ ಮಟ್ಟದಲ್ಲಿ, ಉಪ-ವಿಭಾಗದ ಮಟ್ಟದಲ್ಲಿ ಮತ್ತು ಪೊಲೀಸ್ ಠಾಣೆ ಮಟ್ಟದಲ್ಲಿ ನಡೆಸಲಾಗುತ್ತಿದೆ.<br>➢ ಗಲಭೆ ಪ್ರಕರಣಗಳಲ್ಲಿ ಭಾಗಿಯಾಗುವ ಆರೋಪಿಗಳ ವಿರುದ್ಧ ಸೂಕ್ತ ಕಾನೂನು ರೀತ್ಯಾ ಕ್ರಮಗಳನ್ನು ಜರುಗಿಸಲಾಗುತ್ತಿರುತ್ತದೆ.<br>➢ ಗುಪ್ತ ಮಾಹಿತಿ ಸಿಬ್ಬಂದಿ ಹಾಗೂ ಬೀಟ್ ಸಿಬ್ಬಂದಿಯವರ ಮೂಲಕ ಮುಂಗಡವಾಗಿ ಮಾಹಿತಿಯನ್ನು ಸಂಗ್ರಹಿಸಿ ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಸೂಕ್ತ ಕ್ರಮ ಕೈಕೊಳ್ಳಲಾಗುತ್ತಿದೆ.<br>➢ ದಿನದ 24 ಗಂಟೆಗಳ ಕಾಲ ಗಸ್ತು ಕರ್ತವ್ಯಕ್ಕಾಗಿ ಶಕ್ತಿ ಪೆಟ್ರೋಲಿಂಗ್, ಹೊಯ್ಸಳ ವಾಹನ ನಿಯಮಿತವಾಗಿ ನಿಯೋಜಿಸಲಾಗಿ, ಕಾನೂನು |

| | | |
|---|---|---|
| | | ಸುವ್ಯವಸ್ಥೆಗೆ ಧಕ್ಕೆ ತರುವಂತಹ ರೌಡಿಗಳಿಗೆ ಕಠಿಣವಾದ ಎಚ್ಚರಿಕೆಗಳನ್ನು ನೀಡಿ, ಯಾವುದೇ ಕೃತ್ಯಗಳನ್ನು ಮಾಡಿದಾಗ ಅವರ ಮೇಲೆ ಆಗುವ ಪರಿಣಾಮಗಳ ಗಂಭೀರತೆಯ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಡಲಾಗಿರುತ್ತದೆ.<br>➢ ಸಾಮಾಜಿಕ ಜಾಲ ತಾಣಗಳಲ್ಲಿ ಕೋಮು ಸೌಹಾರ್ದತೆ & ಕದಡುವ ವ್ಯಕ್ತಿಗಳನ್ನು ಗುರುತಿಸಿ ಅಂಥವರ ಮೇಲೆ ನಿಗಾ ಇಡಲಾಗುತ್ತಿದೆ.<br>➢ ರಾಜ್ಯದಲ್ಲಿ ದಾಖಲಾಗುತ್ತಿರುವ ರೌಡಿಶೀಟರ್‌ಗಳನ್ನು ಗಡಿಪಾರು ಮಾಡಿ, ಸದರಿರವರುಗಳ ವಿರುದ್ಧ ಗೂಂಡಾ ಕಾಯ್ದೆ, ಪಿಎಆರ್ ಮತ್ತು ಬಾಂಡ್ ಓವರ್‌ಗಳನ್ನು ಮಾಡಲಾಗುತ್ತಿರುತ್ತದೆ.<br>➢ ಪೊಲೀಸ್ ಠಾಣೆಗಳಲ್ಲಿ ದಾಖಲಾಗುತ್ತಿರುವ ಪ್ರಕರಣಗಳನ್ನು ನಿಷ್ಪಕ್ಷಪಾತವಾಗಿ ತನಿಖೆಯನ್ನು ಮಾಡಿ ಶಿಕ್ಷೆಗೆ ಒಳಪಡಿಸಲು ಎಲ್ಲಾ ಕ್ರಮಕೈಗೊಳ್ಳಲಾಗುತ್ತಿರುತ್ತದೆ. |

**ಸಂಖ್ಯೆ: ಹೆಚ್‌ಡಿ 350 ಎಸ್‌ಎಸ್‌ಟಿ 2024**

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು.